# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ
## ಯೋಜನಾ ಪ್ರಾಧಿಕಾರ

ಪುಟ ಸಂಖ್ಯೆ

ಕಡತದ ಸಂಖ್ಯೆ :.........................................................................

ವಿಷಯ : ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ದೇವನಹಳ್ಳಿ ಗ್ರಾಮದ ಸ.ನಂ 341/1 ರಲ್ಲಿ 2ಎ–17ಗು, 342/1 ರಲ್ಲಿ 0ಎ–20ಗು, 342/2 ರಲ್ಲಿ 0ಎ–36ಗು, 343/1 ರಲ್ಲಿ 0ಎ–36ಗು, 343/2 ರಲ್ಲಿ 0ಎ–07ಗು, 345/2 ರ ಪೈಕಿ 1ಎ–25.08ಗು, 345/2 ರ ಪೈಕಿ 2ಎ–3.08ಗು, 359 ರಲ್ಲಿ 3ಎ–20ಗು, 360 ರಲ್ಲಿ 1ಎ–39ಗು, 361/2 ರಲ್ಲಿ 1ಎ–01ಗು, 362/1 ರಲ್ಲಿ 0ಎ–33ಗು, 362/2 ರಲ್ಲಿ 0ಎ–25ಗು, 367/1 ರಲ್ಲಿ 1ಎ–35ಗು ಒಟ್ಟು 18ಎ–18ಗು ಅಥವಾ 74663.30 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಅನುಮೋದಿತ ಪರಿಷ್ಕೃತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಮುನಿಸಿಪಲ್ ಖಾತಾ ಸಂಖ್ಯೆ: 2714/341/1/342/1/342/2/343/1/343/2/345/2/359/360/361/2/362/1/362/2/367/1 ರಲ್ಲಿ 74663.30 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ **ಟವರ್ ಸಂಖ್ಯೆ – 13, 14, 15, 16, 17, 18, 19** ರಲ್ಲಿ ವಸತಿ ಉಪಯೋಗದ 2 B + G + 14 UF ಹಾಗೂ **ಟವರ್ ಸಂಖ್ಯೆ – 12** ರಲ್ಲಿ ಕ್ಲಬ್‌ಹೌಸ್ ಉಪಯೋಗದ 2B + G + 03 UF ಗಳನ್ನು ಒಳಗೊಂಡಂತೆ ಒಟ್ಟಾರೆ 798 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸಲು ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ.

ಉಲ್ಲೇಖ : ಮುಖ್ಯಾಧಿಕಾರಿಗಳು, ದೇವನಹಳ್ಳಿ ಪುರಸಭೆ ರವರ ಪತ್ರ ದಿನಾಂಕ: 24/12/2024

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದಂತೆ ಖಾತಾ ನಂ 2714/341/1/342/1/342/2/343/1/343/2/345/2/359/360/361/2/362/1/ 362/2/367/1 ರಲ್ಲಿ ಕಟ್ಟಡ ಪರವಾನಿಗೆ ನೀಡುವ ಸಂಬಂಧ ಕಟ್ಟಡ ನಕ್ಷೆಗೆ ತಾಂತ್ರಿಕ ಅಭಿಪ್ರಾಯದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಅರ್ಜಿದಾರರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ "ವಾಸದ" ಉದ್ದೇಶದ ಕಟ್ಟಡ ನಕ್ಷೆಯು ವಲಯನಿಯಮಾವಳಿಯನ್ವಯ ಇರುವುದರಿಂದ ಈ ಕೆಳಕಂಡ ಷರತ್ತುಗಳೊಂದಿಗೆ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೊದನೆ ನೀಡಲಾಗಿದೆ.

**"ಷರತ್ತುಗಳು"**

1. ತಮ್ಮ ಕಛೇರಿಯಿಂದ ಪ್ರಸ್ತಾವಿತ ನಿವೇಶನದಲ್ಲಿ "ವಾಸದ" ಉದ್ದೇಶದ ಕಟ್ಟಡ ಕಟ್ಟಲು ರಹದಾರಿ (ಬಿಲ್ಡಿಂಗ್ ಲೈಸನ್ಸ್) ನೀಡುವ ಮೊದಲು ಸದರಿ ನಿವೇಶನದ ಅಳತೆ ಮತ್ತು ಚೌಕಿರ್ಮಗಳನ್ನು (ಚೆಕ್ಕುಬಂದಿ) ಖಚಿತ ಪಡಿಸಿಕೊಳ್ಳುವುದು.
2. ಅರ್ಜಿದಾರರು ಅನುಮೋದಿತ "ವಾಸದ" ಉದ್ದೇಶದ ಕಟ್ಟಡ ನಕ್ಷೆಯಂತೆ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಪುರಸಭೆಯಿಂದ ಪರಿಶೀಲಿಸಿ ನಿಯಮಾನುಸಾರ ಕ್ರಮ ಜರುಗಿಸುವುದು.
3. ಅನುಮತಿಸಿದ ಉದ್ದೇಶದ ಹೊರತು ಬೇರೆ ಉದ್ದೇಶದ ಕಟ್ಟಡ ಕಟ್ಟಬಾರದು.
4. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರ ಪತ್ರ ಸಂಖ್ಯೆ: ಎಎಐ/ಬಿಐಎ/ಎಟಿಎಂ/ಎನ್‌ಒಸಿ/ಬಿಐಎಎಲ್/ಸೌತ್/ಬಿ/ 103114/ 69598 ದಿನಾಂಕ: 17/12/2014 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
5. ಪ್ರಸ್ತಾವನೆ ಸಂಬಂಧ ಅಗ್ನಿ ಶಾಮಕ ಇಲಾಖೆ ರವರ ಕಛೇರಿ ಪತ್ರ ಸಂಖ್ಯೆ: ಜಿಬಿಸಿ(1)365/2015, ಡಾಕೆಟ್ ನಂ.ಕೆಎಸ್‌ಎಫ್‌ಇಎಸ್/ಎನ್‌ಒಸಿ/266/ 2024, ದಿನಾಂಕ: 04/12/2024 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

6. ಪ್ರಸ್ತಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ ರವರ ಪತ್ರ ಸಂಖ್ಯೆ: ಪಿಸಿಬಿ/31/ಸಿಎನ್‌ಪಿ/16/ಹೆಚ್-610, ದಿ: 22/11/2016 & ಪಿಸಿಬಿ/31/ಸಿಎನ್‌ಪಿ/16/6179, ದಿನಾಂಕ: 17/02/2022 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
7. ಪ್ರಸ್ತಾವನೆ ಸಂಬಂಧ State Level Environment Impact Assessment Authority-Karanataka ರವರ ಪತ್ರ ಸಂಖ್ಯೆ : SEIAA17CON2016, ದಿನಾಂಕ: 28/10/2016 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
8. ಪ್ರಸ್ತಾವನೆ ಸಂಬಂಧ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ ರವರ ಪತ್ರ ಸಂಖ್ಯೆ : ಎಜಿಎಂ(ಟಿಪಿ)ಎಸ್-6/ವಿಒಎಲ್-33/2014-15/09, ಡಿಟಿ@ಬಿಜಿ-8, ದಿನಾಂಕ: 03/12/2014 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
9. ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ ರವರ ಪತ್ರ ಸಂಖ್ಯೆ: ಬಿಸಿ-18/ಮುಪ್ರವ್ಯ(ಕಾ)ಉಪ್ರವ್ಯ-3/ಸಪ್ರವ್ಯ-1/ಕ-533(21)/2016-17/8309-13, ದಿನಾಂಕ: 30/08/2016 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
10. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ-1961 ರ ಕಲಂ-18 ರನ್ವಯ ಸಂಗ್ರಹಿಸಬೇಕಾದ ಶುಲ್ಕ, ಕಟ್ಟಡ ವಿಸ್ತೀರ್ಣ **114281.16** ಚ.ಮೀ **x** ರೂ. **20/-** (ವಸತಿ) ಪ್ರತಿ ಚ.ಮೀ. ಗೆ = ರೂ. **22,85,623.2/- ~ 22,85,640/- & 2989.70** ಚ.ಮೀ **x** ರೂ. **100/-** (ಕ್ಲಬ್‌ಹೌಸ್) ಪ್ರತಿ ಚ.ಮೀ. ಗೆ = ರೂ. **2,98,970/-** ಗಳಂತೆ ಒಟ್ಟಾರೆ ಮೊತ್ತ ರೂ. **25,84,610/-** (ಅಕ್ಷರಗಳಲ್ಲಿ ಇಪ್ಪತ್ತೈದು ಲಕ್ಷದ ಎಂಭತ್ತಾಲ್ಕು ಸಾವಿರದ ಆರುನೂರ ಹತ್ತು ರೂಪಾಯಿಗಳು ಮಾತ್ರ) ಗಳನ್ನು ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ದೇವನಹಳ್ಳಿ ಇವರ ಹೆಸರಿನಲ್ಲಿ ಬ್ಯಾಂಕ್ ಜಮೆ ಮಾಡಿ ನಿರ್ವಹಿಸತಕ್ಕದ್ದು.
11. ಮಳೆ ಕೊಯ್ಲು: ಸೌರಶಕ್ತಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು. (ಅನ್ವಯವಾಗುವುದಿದ್ದಲ್ಲಿ)
12. ಅರ್ಜಿದಾರರು ಅರ್ಜಿಯ ಜೊತೆಗೆ ಲಗತ್ತಿಸಿರುವ ದಾಖಲೆಗಳು ಹಾಗೂ ನೀಡಿರುವ ಮಾಹಿತಿ ಒಂದು ವೇಳೆ ಸುಳ್ಳು/ದುರುದ್ದೇಶದಿಂದ ಕೂಡಿದ್ದು ಅಂತ ಕಂಡುಬಂದಲ್ಲಿ ಈಗ ನೀಡಿರುವ ತಾಂತ್ರಿಕ ಅಭಿಪ್ರಾಯ ಯಾವ ಪೂರ್ವ ಸೂಚನೆ ಇಲ್ಲದೆ ತನ್ನಿಂದ ತಾನೇ ರದ್ದಾಗುತ್ತದೆ ಹಾಗೂ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರದ ಹೊಣೆಗಾರಿಕೆ ಇರುವುದಿಲ್ಲ.
13. ಅರ್ಜಿದಾರರು ನಿವೇಶನದ ಮಾಲೀಕತ್ವ ಹಾಗೂ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳ ಬಗ್ಗೆ ಪುರಸಭೆಯಿಂದ ನಿಯಮಾನುಸಾರ ಪರಿಶೀಲಿಸಿಕೊಂಡು ಮುಂದಿನ ಸೂಕ್ತ ಕ್ರಮವಹಿಸುವುದು..

ತಮ್ಮ ವಿಶ್ವಾಸಿ

01/03/2022

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.